**National**
**Kannada**
**03.08.2024 / 19.35 hrs**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

<u>ಮುಖ್ಯಾಂಶಗಳು</u>

೧. ಜಾಗತಿಕ ಆಹಾರ ಭದ್ರತೆ ವಿಷಯ ಕುರಿತಂತೆ ಪರಿಹಾರ ಕಲ್ಪಿಸುವಲ್ಲಿ ಭಾರತ ನಿರತ- ಪ್ರಧಾನಮಂತ್ರಿ ನರೇಂದ್ರ ಮೋದಿ

೨. ದೇಶದ ಆದಾಯ ತೆರಿಗೆ ರಿಟರ್ನ್ಸ್- ಐಟಿಆರ್ ಸಂಖ್ಯೆಯಲ್ಲಿ ಹೊಸ ದಾಖಲೆ; ಜುಲೈ ೩೧ರ ವೇಳೆಗೆ ೭.೮ ಕೋಟಿ ತೆರಿಗೆದಾರರಿಂದ ರಿಟರ್ನ್ಸ್ ಸಲ್ಲಿಕೆ

೩. ವಯನಾಡು ಭೂಕುಸಿತ-ಮೃತಪಟ್ಟವರ ಸಂಖ್ಯೆ ೩೬೬ ಕ್ಕೆ ಏರಿಕೆ; ಮುಂದುವರಿದ ಪರಿಹಾರ ಕಾರ್ಯಾಚರಣೆ

೪. ಇಂದು ಅಂಗಾಂಗ ದಾನ ದಿನ; ದೇಶಾದ್ಯಂತ ಜಾಗೃತಿ ಕಾರ್ಯಕ್ರಮ ಆಯೋಜನೆ

೫. ಪ್ಯಾರಿಸ್ ಒಲಿಂಪಿಕ್ಸ್; ಮಹಿಳೆಯರ ೨೫ ಮೀಟರ್ ಶೂಟಿಂಗ್ ಸ್ಪರ್ಧೆಯಲ್ಲಿ ನಾಲ್ಕನೇ ಸ್ಥಾನ ಪಡೆದ ಭಾರತದ ಮನು ಭಾಕರ್

**<><*<><>*><>**

ಭಾರತ ಹೆಚ್ಚುವರಿ ಆಹಾರ ಉತ್ಪಾದಿಸುವ ದೇಶವಾಗಿದ್ದು, ಜಾಗತಿಕ ಆಹಾರ ಭದ್ರತೆ ಹಾಗೂ ಪೌಷ್ಟಿಕಾಂಶ ಭದ್ರತೆ ಕುರಿತಂತೆ ಸಮಸ್ಯೆಗೆ ಪರಿಹಾರ ಕಲ್ಪಿಸುವಲ್ಲಿ ನಿರತವಾಗಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ನವದೆಹಲಿಯಲ್ಲಿಂದು ಕೃಷಿ ಅರ್ಥಶಾಸ್ತ್ರಜ್ಞರ ೩೨ನೇ ಅಂತಾರಾಷ್ಟ್ರೀಯ ಸಮ್ಮೇಳನ ಉದ್ದೇಶಿಸಿ ಮಾತನಾಡಿದ ಅವರು, ರೈತರ ಜೀವನವನ್ನು ಸುಧಾರಿಸುವ ಉದ್ದೇಶದಿಂದ ಸರ್ಕಾರ ಹಲವಾರು ಸುಧಾರಣೆಗಳು ಹಾಗೂ ಕ್ರಮಗಳೊಂದಿಗೆ ಕೃಷಿ ವಲಯವನ್ನು ಬಲಪಡಿಸುತ್ತಿದೆ ಎಂದು ತಿಳಿಸಿದರು. ಕೃಷಿ ವಲಯ, ಸರ್ಕಾರದ ಆರ್ಥಿಕ ನೀತಿಯ ಕೇಂದ್ರ ಬಿಂದುವಾಗಿದೆ. ಭಾರತ ಸಿರಿಧಾನ್ಯಗಳು, ಹಾಲು, ಬೇಳೆಕಾಳು ಹಾಗೂ ಸಾಂಬಾರು ಪದಾರ್ಥಗಳ ಅತಿದೊಡ್ಡ ಉತ್ಪಾದಕ ದೇಶವಾಗಿದೆ ಎಂದು ಹೇಳಿದರು. ಭಾರತ ರಾಸಾಯನಿಕ ಮುಕ್ತ ನೈಸರ್ಗಿಕ ಕೃಷಿಯನ್ನು ಉತ್ತೇಜಿಸುತ್ತಿದ್ದು, ೨೦೨೪-೨೫ರ ಕೇಂದ್ರ ಮುಂಗಡ ಪತ್ರದಲ್ಲಿ ಸುಸ್ಥಿರ ಕೃಷಿಗೆ ಹೆಚ್ಚಿನ ಒತ್ತು ನೀಡಲಾಗಿದೆ ಎಂದರು. ಕಳೆದ ೧೦ ವರ್ಷಗಳಲ್ಲಿ ಸರ್ಕಾರ ೧ ಸಾವಿರದ ೯೦೦ ಹೊಸ ಹವಾಮಾನ ನಿರೋಧಕ ಬೆಳೆ ತಳಿಗಳನ್ನು ಕಲ್ಪಿಸಿದೆ. ಕೃಷಿ ವಲಯದಲ್ಲಿ ಡಿಜಿಟಲ್ ತಂತ್ರಜ್ಞಾನ ಬಳಸಲಾಗುತ್ತಿದೆ. ಪಿಎಂ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ರೈತರ ಬ್ಯಾಂಕ್ ಖಾತೆಗಳಿಗೆ ಹಣವನ್ನು ನೇರವಾಗಿ ವರ್ಗಾಯಿಸಲಾಗುತ್ತಿದೆ ಎಂದು ವಿವರಿಸಿದರು.

**<><*<><>*><>**

ಭಾರತದಲ್ಲಿ ಕೃಷಿ ಸಂಶೋಧನೆ ಹಾಗೂ ಶಿಕ್ಷಣಕ್ಕೆ ಸದೃಢ ವ್ಯವಸ್ಥೆ ರೂಪಿಸಲಾಗಿದೆ. ಕೃಷಿ ಶಿಕ್ಷಣಕ್ಕಾಗಿ ೫೦೦ಕ್ಕೂ ಹೆಚ್ಚು ಶಿಕ್ಷಣಕ್ಕಾಗಿ ೫೦೦ಕ್ಕೂ ಹೆಚ್ಚು ಕಾಲೇಜುಗಳು ಹಾಗೂ ೭೦೦ಕ್ಕೂ ಹೆಚ್ಚು ಕೃಷಿ ವಿಜ್ಞಾನ ಕೇಂದ್ರಗಳು ರೈತರಿಗೆ ಹೊಸ ಕೇಂದ್ರಗಳು ರೈತರಿಗೆ ಹೊಸ ತಂತ್ರಜ್ಞಾನಗಳ ಬಗ್ಗೆ ಮಾಹಿತಿ ಕಲ್ಪಿಸುತ್ತಿವೆ ಎಂದರು. ಕಳೆದ ೧೦ ವರ್ಷಗಳಲ್ಲಿ ೯೦ ಲಕ್ಷ ವರ್ಷಗಳಲ್ಲಿ ೯೦ ಲಕ್ಷ ಹೆಕ್ಟೇರ್ ಭೂಮಿಯನ್ನು ನೀರಾವರಿಗೆ ಒಳಪಡಿಸಲಾಗಿದೆ. ರೈತರಿಗೆ ಅವರ ಜಮೀನಿನ ಡಿಜಿಟಲ್ ಜಮೀನಿನ ಡಿಜಿಟಲ್ ಗುರುತಿನ ಸಂಖ್ಯೆ ನೀಡಲು ಅನುಕೂಲವಾಗುವಂತೆ ಭೂಮಿಯ ಡಿಜಿಟಲೀಕರಣ ಹಾಗೂ ಕೃಷಿ ಹಾಗೂ ಕೃಷಿ ವಲಯದಲ್ಲಿ ಡ್ರೋನ್‌ಗಳ ಬಳಕೆ ಪ್ರೋತ್ಸಾಹಿಸಲು ಬೃಹತ್ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು

ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು. ಕೃಷಿ ಅರ್ಥಶಾಸ್ತ್ರಜ್ಞರ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ೭೫ ದೇಶಗಳ ೧ ಸಮ್ಮೇಳನದಲ್ಲಿ ೭೫ ದೇಶಗಳ ೧ ಸಾವಿರ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಸುಸ್ಥಿರ ಕೃಷಿ ಆಹಾರ ವ್ಯವಸ್ಥೆಗಳತ್ತ ವ್ಯವಸ್ಥೆಗಳತ್ತ ಪರಿವರ್ತನೆ ಎಂಬುದು ಈ ವರ್ಷದ ಸಮ್ಮೇಳನದ ಘೋಷವಾಕ್ಯವಾಗಿದೆ.

**<><*<><>*><>**

ದೇಶದ ಆದಾಯ ತೆರಿಗೆ ರಿಟರ್ನ್ಸ್ ಐಟಿಆರ್ ಸಲ್ಲಿಕೆಯಲ್ಲಿ ಹೊಸ ದಾಖಲೆ ಸೃಷ್ಟಿಯಾಗಿದೆ. ೨೦೨೩-೨೪ನೇ ಆರ್ಥಿಕ ವರ್ಷದಲ್ಲಿ ಗಳಿಸಿದ ಆದಾಯಕ್ಕೆ ಸಂಬಂಧಿಸಿದಂತೆ ಜುಲೈ ೩೧ರ ವೇಳೆಗೆ ೭.೨೮ ಕೋಟಿ ತೆರಿಗೆದಾರರು ತೆರಿಗೆ ರಿಟರ್ನ್ಸ್ ಸಲ್ಲಿಸಿದ್ದಾರೆ. ೨೦೨೪-೨೫ನೇ ಮೌಲ್ಯಮಾಪನ ವರ್ಷಕ್ಕೆ ಸಂಬಂಧಿಸಿದಂತೆ ರಿಟರ್ನ್ಸ್ ಸಲ್ಲಿಸಲು ಅಂತಿಮ ದಿನವಾಗಿದ್ದ ಜುಲೈ ೩೧ರವರೆಗೆ ೭.೨೮ ಕೋಟಿಗೂ ಹೆಚ್ಚು ಐಟಿಆರ್ ಸಲ್ಲಿಕೆಯಾಗಿದ್ದು, ಇದೊಂದು ದಾಖಲೆಯಾಗಿದೆ ಎಂದು ಆದಾಯ ತೆರಿಗೆ ಇಲಾಖೆ ತಿಳಿಸಿದೆ. ಕಳೆದ ವರ್ಷ ೬.೭೭ ಕೋಟಿ ತೆರಿಗೆದಾರರು ಐಟಿಆರ್ ಸಲ್ಲಿಸಿದ್ದರು. ಈ ವರ್ಷ ಇದು ಶೇಕಡ ೭.೫ ರಷ್ಟು ಹೆಚ್ಚಳವಾಗಿದೆ. ೭.೨೮ ಕೋಟಿ ರಿಟರ್ನ್ಸ್‌ಗಳ ಪೈಕಿ ೫.೨೭ ಕೋಟಿ ತೆರಿಗೆದಾರರು ಹೊಸ ತೆರಿಗೆ ಪದ್ಧತಿ ಆಯ್ದುಕೊಂಡಿದ್ದಾರೆ. ೨.೦೧ ಕೋಟಿ ತೆರೆಗೆದಾರರು ಹಳೆಯ ಪದ್ಧತಿಯಲ್ಲಿ ರಿಟರ್ನ್ಸ್ ಸಲ್ಲಿಸಿದ್ದಾರೆ. ಶೇಕಡ ೭೨ ರಷ್ಟು ತೆರಿಗೆದಾರರು ಹೊಸ ತೆರಿಗೆ ಪದ್ಧತಿ ಆಯ್ಕೆ ಮಾಡಿಕೊಂಡಿದ್ದು, ಶೇಕಡ ೨೮ ರಷ್ಟು ತೆರಿಗೆದಾರರು ಹಳೆ ಪದ್ಧತಿಯಲ್ಲಿ ಮುಂದುವರೆದಿದ್ದಾರೆ. ಜುಲೈ ೩೧ ರಂದು ಒಂದೇ ದಿನ ೬೯.೯೨ ಲಕ್ಷ ರಿಟರ್ನ್ಸ್ ಸಲ್ಲಿಕೆಯಾಗಿದೆ. ಮೊದಲ ಬಾರಿಗೆ ಐಟಿ ರಿಟರ್ನ್ಸ್ ಸಲ್ಲಿಸಿದವರ ಸಂಖ್ಯೆ ೫೮.೫೭ ಲಕ್ಷದಷ್ಟಿದೆ ಎಂದು ಆದಾಯ ತೆರಿಗೆ ಇಲಾಖೆ ತಿಳಿಸಿದೆ.

**<><*<><>*><>**

’ಹರ್ ಘರ್ ತಿರಂಗ’ ಅಭಿಯಾನದ ಆಂದೋಲನದಲ್ಲಿ ಎಲ್ಲಾ ನಾಗರಿಕರು ಉತ್ಸಾಹದಿಂದ ಪಾಲ್ಗೊಳ್ಳುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಮನವಿ ಮಾಡಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅಮಿತ್ ಶಾ, ಆಗಸ್ಟ್ ೯ ರಿಂದ ೧೫ ರವರೆಗೆ ನಾಗರಿಕರು ತಮ್ಮ ಮನೆಗಳಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸುವಂತೆ ಕೋರಿದ್ದಾರೆ. ಪ್ರಧಾನಿ ನರೇಂದ್ರ ಮೋದಿಯವರು ಆರಂಭಿಸಿದ ’ಹರ್ ಘರ್ ತಿರಂಗ’ ಅಭಿಯಾನವು, ಕಳೆದ ಎರಡು ವರ್ಷಗಳಿಂದ ರಾಷ್ಟ್ರೀಯ ಆಂದೋಲನವಾಗಿ ರೂಪುಗೊಂಡಿದೆ. ಇದು ರಾಷ್ಟ್ರದ ಉದ್ದಗಲಕ್ಕೂ ಇರುವ ಪ್ರತಿಯೊಬ್ಬ ಭಾರತೀಯನಲ್ಲೂ ಏಕತೆ ಭಾವವನ್ನು ಜಾಗೃತಗೊಳಿಸುತ್ತಿದೆ ಎಂದು ಹೇಳಿದ್ದಾರೆ. ತಿರಂಗದೊಂದಿಗೆ ಸೆಲ್ಫಿ ತೆಗೆದುಕೊಂಡು ಅದನ್ನು ’ಹರ್ ಘರ್ ತಿರಂಗ’ ವೆಬ್‌ಸೈಟ್ - **hargartiranga.com** ನಲ್ಲಿ ಅಪ್‌ಲೋಡ್ ಮಾಡುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

**<><*<><>*><>**

ಕೇರಳದ ವಯನಾಡ್ ಜಿಲ್ಲೆಯ ಭೂಕುಸಿತ ಪ್ರದೇಶಗಳಲ್ಲಿ ಸೇನೆಯಿಂದ ಮಾನವೀಯ ನೆರವು ಮತ್ತು ಶೋಧ ಕಾರ್ಯಾಚರಣೆ ಮುಂದುವರೆದಿದೆ. ಇದುವರೆಗೆ ಅವಘಡದಲ್ಲಿ ಮೃತಪಟ್ಟವರ ಸಂಖ್ಯೆ ೩೬೬ ಏರಿಕೆಯಾಗಿದ್ದು, ೨೦೬ ಮಂದಿ ನಾಪತ್ತೆಯಾಗಿದ್ದಾರೆ. ಇಂದು ೫ನೇ ದಿನವೂ ೧ ಸಾವಿರದ ೩೦೦ ಕ್ಕೂ ಹೆಚ್ಚು ರಕ್ಷಣಾ ಸಿಬ್ಬಂದಿ ಭಾರೀ ಯಂತ್ರೋಪಕರಣಗಳು ಹಾಗೂ ಅತ್ಯಾಧುನಿಕ ಉಪಕರಣಗಳೊಂದಿಗೆ ಶೋಧ ಕಾರ್ಯಾಚರಣೆ ಮುಂದುವರಿಸಿದ್ದಾರೆ. ಭಾರತೀಯ ಸೇನೆ, ಎನ್‌ಡಿಆರ್‌ಎಫ್ ಮತ್ತು ಇತರೆ ಸಂಸ್ಥೆಗಳನ್ನು ಒಳಗೊಂಡ ರಕ್ಷಣಾ ಸಿಬ್ಬಂದಿ ಮೃತದೇಹಗಳನ್ನು ಪತ್ತೆಹಚ್ಚುವ ಪ್ರಯತ್ನದಲ್ಲಿ ಭೂಕುಸಿತ ಪ್ರದೇಶದಲ್ಲಿ ಬೀಡುಬಿಟ್ಟಿದ್ದಾರೆ. ಕೇರಳ ಸರ್ಕಾರದ ಮನವಿಯ ಮೇರೆಗೆ ಭೂಕುಸಿತ ಪ್ರದೇಶದಲ್ಲಿ ಶೋಧಕಾರ್ಯಕ್ಕಾಗಿ ಭಾರತೀಯ ಸೇನೆಯು ಒಂದು ಕ್ಸೇವರ್ ರಾಡಾರ್, ನಾಲ್ಕು ರೆಕ್ಕೊ ರಾಡಾರ್‌ಗಳನ್ನು ದೆಹಲಿಯಿಂದ ಏರ್‌ಲಿಫ್ಟ್ ಮಾಡುವುದಾಗಿ ಹೇಳಿದೆ.

**<><*<><>*><>**

ಇಂದು ದೇಶಾದ್ಯಂತ ’ಅಂಗಾಂಗ ದಾನ ದಿನ’ವನ್ನು ಆಚರಿಸಲಾಗುತ್ತಿದೆ. ಇದರ ಅಂಗವಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯದ ಅಡಿಯಲ್ಲಿ ರಾಷ್ಟ್ರೀಯ ಅಂಗ ಮತ್ತು ಅಂಗಾಂಗ ಕಸಿ ಸಂಸ್ಥೆ-ಎನ್.ಒ.ಟಿ.ಟಿ.ಒ ನವದೆಹಲಿಯಲ್ಲಿ ಅಂಗಾಂಗ ದಾನ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಿತ್ತು. ಈ ಸಂದರ್ಭದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ರಾಜ್ಯ ಸಚಿವೆ ಅನುಪ್ರಿಯಾ ಪಟೇಲ್, ಮೆದುಳು ನಿಷ್ಕ್ರಿಯಗೊಂಡ ನಂತರ ತಮ್ಮ ಕುಟುಂಬ ಸದಸ್ಯರ ಅಂಗಾಂಗಗಳನ್ನು ದಾನ ಮಾಡಿದ ಕುಟುಂಬಗಳನ್ನು ಸನ್ಮಾನಿಸಿದರು. ಜತೆಗೆ ದಾನ ಮಾಡಿದ ಅಂಗಾಂಗಗಳನ್ನು ಸ್ವೀಕರಿಸಿದವರಿಗೆ ಮತ್ತು ಯಶಸ್ವಿ ಅಂಗಾಂಗ ಕಸಿಗಾಗಿ ಶ್ರಮಿಸಿದ ವೈದ್ಯರನ್ನು ಅವರು ಅಭಿನಂದಿಸಿದರು.  ಕಳೆದ ಹತ್ತು ವರ್ಷಗಳಲ್ಲಿ ಅಂಗಾಂಗ ದಾನ ಪ್ರಮಾಣ ನಾಲ್ಕು ಪಟ್ಟು ಹೆಚ್ಚಾಗಿದೆ ಎಂದು ಅವರು ತಿಳಿಸಿದರು. ಎನ್ಐಟಿಐ ಆಯೋಗದ ಸದಸ್ಯ ಡಾ.ವಿ.ಕೆ.ಪಾಲ್ ಮಾತನಾಡಿ, ರಾಷ್ಟ್ರದಾದ್ಯಂತ ಇರುವ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗಳು ಅಂಗಾಂಗ ಕಸಿ ಸೌಲಭ್ಯಗಳನ್ನು ಒದಗಿಸಬೇಕು ಎಂದು ಅವರು ಒತ್ತಾಯಿಸಿದರು.

<><*<><>*><>

ಕೇಂದ್ರ ಆರೋಗ್ಯ ಕಾರ್ಯದರ್ಶಿ ಅಪೂರ್ವ ಚಂದ್ರ ಅವರು ಡೆಂಘಿ ತಡೆಗಟ್ಟುವಿಕೆ, ನಿಯಂತ್ರಣ ಮತ್ತು ನಿರ್ವಹಣೆಗಾಗಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಯ ಸನ್ನದ್ಧತೆಯನ್ನು ಪರಿಶೀಲಿಸಲು ನವದೆಹಲಿಯಲ್ಲಿಂದು ಉನ್ನತ ಮಟ್ಟದ ಸಭೆ ನಡೆಸಿದರು. ಸಭೆಯಲ್ಲಿ ಅವರು, ದೇಶದಲ್ಲಿ ಡೆಂಘಿ ಸಾವಿನ ಪ್ರಮಾಣ ೧೯೯೬ ರಲ್ಲಿ ಶೇಕಡ ೩.೩ ರಿಂದ ೨೦೨೩ರಲ್ಲಿ ಶೇಕಡ ೦.೧೭ಕ್ಕೆ ಕಡಿಮೆಯಾಗಿದೆ. ಹಾಟ್‌ಸ್ಪಾಟ್‌ಗಳನ್ನು ಗುರುತಿಸುವುದು, ವೆಕ್ಟರ್ ಕಣ್ಗಾವಲು ಹೆಚ್ಚಿಸುವುದು ಮತ್ತು ತಡೆಗಟ್ಟುವ ಕ್ರಮಗಳನ್ನು ಕೈಗೊಳ್ಳಲು ಪ್ರಕರಣಗಳ ಜಿಯೋಟ್ಯಾಗ್ ಮಾಡಬೇಕು ಎಂದು ಸಲಹೆ ನೀಡಿದರು. ಸಭೆಯಲ್ಲಿ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ಹಾಗೂ ಕರ್ನಾಟಕ, ದೆಹಲಿ, ಗುಜರಾತ್, ಮಹಾರಾಷ್ಟ್ರ, ರಾಜಸ್ಥಾನ, ತಮಿಳುನಾಡು, ತೆಲಂಗಾಣ, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳ ಕಾರ್ಯದರ್ಶಿಗಳು ಮತ್ತು ಉನ್ನತ ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು. ಅಲ್ಲದೇ, ಬೆಂಗಳೂರು, ಅಹಮದಾಬಾದ್, ಚೆನ್ನೈ, ದೆಹಲಿ, ಹೈದರಾಬಾದ್ ಮತ್ತು ಮುಂಬೈ ಸೇರಿದಂತೆ ೧೮ ಮುನ್ಸಿಪಲ್ ಕಾರ್ಪೊರೇಷನ್‌ಗಳ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು. ಕರ್ನಾಟಕ, ಕೇರಳ, ತಮಿಳುನಾಡು ಮತ್ತು ಮಹಾರಾಷ್ಟ್ರದಲ್ಲಿ ಅತಿ ಹೆಚ್ಚು ಡೆಂಘಿ ಪ್ರಕರಣಗಳು ವರದಿಯಾಗಿವೆ.

<><*<><>*><>

ಆರು ರಾಜ್ಯಗಳಾದ್ಯಂತ ಪಶ್ಚಿಮ ಘಟ್ಟಗಳ ೫೬ ಸಾವಿರದ ೮೦೦ ಚದರ ಕಿಲೋಮೀಟರ್ ಪ್ರದೇಶ ಪರಿಸರ ಸೂಕ್ಷ್ಮ ಪ್ರದೇಶ ಎಂದು ಘೋಷಿಸಲು ಕೇಂದ್ರ ಸರ್ಕಾರ ಹೊಸ ಕರಡು ಅಧಿಸೂಚನೆ ಹೊರಡಿಸಿದೆ.  ಕರ್ನಾಟಕ, ಗುಜರಾತ್, ಮಹಾರಾಷ್ಟ್ರ, ಗೋವಾ, ಕೇರಳ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಮುಂದಿನ ೬೦ ದಿನಗಳಲ್ಲಿ ಸಾರ್ವಜನಿಕರಿಂದ ಸಲಹೆ ಮತ್ತು ಆಕ್ಷೇಪಣೆಗಳನ್ನು ಸರ್ಕಾರ ಆಹ್ವಾನಿಸಿದೆ. ಜನರು ತಮ್ಮ ಸಲಹೆಗಳನ್ನು ಮತ್ತು ಆಕ್ಷೇಪಣೆಗಳನ್ನು **esz-mef@nic.in** ನಲ್ಲಿ ಇಮೇಲ್ ಮಾಡಬಹುದು. ಪರಿಸರ ಸೂಕ್ಷ್ಮ ಪ್ರದೇಶವೆಂದು ಘೋಷಿಸಿದ ನಂತರ, ಈ ಪ್ರದೇಶಗಳಲ್ಲಿ ಕಲ್ಲುಗಣಿಗಾರಿಕೆ, ಗಣಿಗಾರಿಕೆ ಮತ್ತು ದೊಡ್ಡ ಮೂಲಸೌಕರ್ಯ ಅಭಿವೃದ್ಧಿಯಂತಹ ಆರ್ಥಿಕ ಚಟುವಟಿಕೆಗಳ ಮೇಲೆ ನಿರ್ಬಂಧವಿರುತ್ತದೆ.

<><*<><>*><>

ಪ್ಯಾರಿಸ್ ಒಲಿಂಪಿಕ್ಸ್ ೨೦೨೪ರ ಎಂಟನೇ ದಿನವಾದ ಇಂದು ಭಾರತ ಮಿಶ್ರ ಫಲಿತಾಂಶ ಕಂಡಿದೆ. ಬಿಲ್ಲುಗಾರಿಕೆಯ ಮಹಿಳೆಯರ ವೈಯಕ್ತಿಕ ವಿಭಾಗದಲ್ಲಿ, ಇಂದು ಅಪರಾಹ್ನ ಕ್ವಾರ್ಟರ್ ಫೈನಲ್ ತಲುಪಿ, ಮತ್ತೊಂದು ಆಸೆ ಮೂಡಿಸಿದ್ದ ಭಾರತದ ದೀಪಿಕಾ ಕುಮಾರಿ, ಕ್ವಾರ್ಟರ್ ಫೈನಲ್ಸ್‌ನಲ್ಲಿ ದಕ್ಷಿಣ ಕೋರಿಯಾದ ನಾಮ್ ಸು ಹಿಯಾನ್ ವಿರುದ್ಧ ೬-೪ ಅಂತರದಲ್ಲಿ ಪರಾಭವಗೊಂಡಿದ್ದಾರೆ. ಇದೇ ವಿಭಾಗದಲ್ಲಿ ಸ್ಪರ್ಧಿಸಿದ್ದ ಮತ್ತೊಬ್ಬ ಭಾರತದ ಆಟಗಾರ್ತಿ ಭಜನ್ ಕೌರ್, ೧೬ರ ಸುತ್ತಿನಲ್ಲಿ ಇಂಡೋನೇಷ್ಯಾದ ಡಿಯಾನಂದ್ ಚೊಯ್ರುನಿಸಾ ವಿರುದ್ಧ ಸೋಲು ಅನುಭವಿಸಿದರು. ಶೂಟಿಂಗ್‌ನಲ್ಲಿ ತಮ್ಮ ಮೂರನೇ ಪದಕದ ಮೇಲೆ ಕಣ್ಣಿಟ್ಟಿದ್ದ ಮನು ಭಾಕರ್ ಅವರು ಇಂದು ನಡೆದ ಮಹಿಳೆಯರ ೨೫ ಮೀಟರ್ಸ್ ಪಿಸ್ತೂಲ್ ಸ್ಪರ್ಧೆಯ ಫೈನಲ್‌ನಲ್ಲಿ ೨೮ ಅಂಕಗಳೊಂದಿಗೆ ನಾಲ್ಕನೇ ಸ್ಥಾನ ಪಡೆದು, ಪದಕ ವಂಚಿತರಾಗಿದ್ದಾರೆ. ದಕ್ಷಿಣ ಕೊರಿಯಾದ ಜೆ ಯಾಂಗ್ ಜಿನ್, ೩೭ ಅಂಕಗಳೊಂದಿಗೆ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ. ಭಾಕರ್ ಮಹಿಳೆಯರ ೧೦ ಮೀಟರ್ ಪಿಸ್ತೂಲ್ ಮತ್ತು ಮಿಶ್ರ ತಂಡ ೧೦ ಮೀಟರ್ ಪಿಸ್ತೂಲ್ ಸ್ಪರ್ಧೆಗಳಲ್ಲಿ ಈಗಾಗಲೇ ಕಂಚಿನ ಪದಕಗಳನ್ನು ಗೆದ್ದು ಇತಿಹಾಸ ನಿರ್ಮಿಸಿದ್ದಾರೆ.  ಶೂಟಿಂಗ್ ಸೇರಿದಂತೆ ಇಂದು ಭಾರತೀಯ ಕ್ರೀಡಾಪಟುಗಳು ಬಿಲ್ಲುಗಾರಿಕೆ, ಬಾಕ್ಸಿಂಗ್, ಸೇಲಿಂಗ್ ಮತ್ತು ಗಾಲ್ಫ್‌ನಲ್ಲಿ ಭಾಗವಹಿಸುತ್ತಿದ್ದಾರೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>